ಗಮನ ಸೆಳೆಯುವ ಸೂಚನೆ

ವಿಷಯ.--ಬಳ್ಳಾರಿಯಲ್ಲಿ ಮಂಹಿಳೆಯೊಬ್ಬರ ಮೇಲೆ ಪೋಲೀಸ್ ಸಿಬ್ಬಂದಿಯವರು ನಡೆಸಿದ ಅತ್ಯಾಚಾರದ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು ಬಳ್ಳಾರಿಯಲ್ಲಿ ಮಂಹಿಳೆಯೊಬ್ಬರ ಮೇಲೆ ಪೋಲೀಸ್ ಸಿಬ್ಬಂದಿಯವರು ನಡೆಸಿದ ಅತ್ಯಾಚಾರ ಹಾಗೂ ಸಾರ್ವಜನಿಕರ ಮೇಲೆ ಪೋಲೀಸಿನ ವರು ನಡೆಸಿದ ಗೋಲಿಬಾರ್‌ನಿಂದಾಗಿ ಏಳು ಜನರು ಮೃತಪಟ್ಟಿರುವ ವಿಚಾರವನ್ನು ಮುಖ್ಯ ಮಂತ್ರಿ ಗಳ ಗಮನಕ್ಕೆ ತರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.--ಸನ್ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳ ೧೪ ರಂದು ಬಳ್ಳಾರಿಯಲ್ಲಿ ಆದಂಥ ಘಟನೆ ಅತ್ಯಂತ ದುರದೃಷ್ಟಕರವಾದಂಥ ಘಟನೆ. ಮತ್ತು ಇದು ನಮ್ಮೆಲ್ಲರಿಗೂ ಖೇದ ಆದಂಥ ಘಟನೆ. ಈ ಸಂಬಂಧದಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂಬ ನಿರ್ಣಯ ತೆಗೆದುಕೊಂಡಿರು ವುದರಿಂದ ಆದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದೆಲ್ಲಾ ಹೊರಬರುವುದರಿಂದ ಈಗ ಇಲ್ಲಿ ಇದು ಚರ್ಚೆಯಾಗುವುದು ಸಾದುವಲ್ಲವೆಂದು ನಾನು ಭಾವಿಸಿದ್ದೇನೆ. ಈಗ ಈ ಸಂಬಂಧದಲ್ಲಿ ನಮಗೆ ಸಿಕ್ಕಿದಂಥ ವಸ್ತುಸ್ಥಿತಿಯ ಚಿತ್ರವನ್ನು ತಮ್ಮ ಮುಂದೆ ಮತ್ತು ಈ ಸದನದ ಮುಂದೆ ಇಡುವುದಕ್ಕೆ ಬಯಸುತ್ತೇನೆ.

ಬಳ್ಳಾರಿ ನಗರದ ಕೌಲ್ ಬಜಾರ್ ಪೋಲೀಸ್ ಠಾಣೆ ಸಮೀಪ ದಿನಾಂಕ ೧೬ನೇ ಫೆಬ್ರುವರಿ ೧೯೮೩ ರಂದು ಸುಮಾರು ಒಂದು ಸಾವಿರ ಜನರ ಗುಂಪು ಸೇರಿ ದಿನಾಂಕ ೧೪ನೇ ಫೆಬ್ರುವರಿ ೧೯೮೩ ರಂದು ಪೋಲೀಸ್ ಠಾಣೆಯಲ್ಲಿ ಒಬ್ಬ ಯುವತಿಯ ಮಾನ ಹಾನಿಯ ಆರೋಪಣೆಯ ಬಗ್ಗೆ ಸಂಬಂಧಿಸಿದ ಪೋಲೀಸ್ ಸಿಬ್ಬಂದಿಯ ಮೇಲೆ ಕ್ರಮ ತೆಗೆದುಕೊಳ್ಳಲು ಆಗ್ರಹ ಮಾಡಿದರು. ಪೋಲೀಸ್ ಸೂಪರಿಂಟೆಂಡೆಂಟ್‌ರವರು ಸ ಳಕ್ಕೆ ದಾವಿಸಿ ಒಬ್ಬ ಪೋಲೀಸ್ ಪೇದೆಯನ್ನು ಅಮಾನತ್ತಿನಲ್ಲಿಟ್ಟರು. ಆ ಯುವತಿಯ ದೂರಿನ ಮೇಲೆ ಭಾರತೀಯ ದಂಡ ಸಂಹಿತೆಯ ಕಲಂ ೩೭೬ರ ಅನ್ವಯ ಒಂದು ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಆ ಪೋಲೀಸ್ ಪೇದೆಯನ್ನು ಬಂಧನದಲ್ಲಿಡಲಾಯಿತು. ಜನರ ಗುಂಪು ಪೋಲೀಸ್ ಅಧಿಕಾರಿಗಳು ಮತ್ತು ಸ್ಥಳೀಯ ನಾಯಕರು ಭಿನ್ನವಿಸಿಕೊಂಡರೂ ಚದುರಲಿಲ್ಲ. ಜನರ ಗುಂಪು ಹಿಂಸಾಚಾರಕ್ಕೆ ಇಳಿದು ಪೋಲೀಸ್ ಠಾಣೆ ಮೇಲೆ ದಾಳಿ ಇಟ್ಟು ಅದರ ಒಂದು ಭಾಗಕ್ಕೆ ಬೆಂಕಿ ಹಚ್ಚಿತು. ಜನರ ಗುಂಪು ಪೋಲೀಸ್ ಸಿಬ್ಬಂದಿಯ ಮೇಲೆ ಮತ್ತು ಇತರರ ಮೇಲೆ ಕಲ್ಲು ತೂರಾಡಲು ತೊಡಗಿತು ಮತ್ತು ಎರಡು ಪೋಲೀಸ್ ವಾಹನಗಳಿಗೆ ಬೆಂಕಿ ಇಟ್ಟಿತು. ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗ ನಿರುಪಯುಕ್ತವಾದ ಕಾರಣ ಪೋಲೀಸರು ಗಾಳಿಯಲ್ಲಿ ನಂತರ ಗುಂಪಿನ ಮೇಲೆ ಆದನ್ನು ಚದುರಿಸಲು ಗುಂಡು ಹಾರಿಸಿದರು. ಸುಮಾರು ೫೦ ಜನ ಪೋಲೀಸರು ಕಲ್ಲೇಟಿನಿಂದ ತೀವ್ರ ಗಾಯವನ್ನು ಹೊಂದಿದರು ಮತ್ತು ೮ ಜನರು ಪೋಲೀಸ್ ಗೋಲೀಬಾರಿನಲ್ಲಿ ಗಾಯಗೊಂಡವರನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಯಿತು.

೨. ಪೂರ್ವ ವಲಯದ ಡಿ.ಐ.ಜಿ.ಯವರನ್ನು ಬಳ್ಳಾರಿಗೆ ಧಾವಿಸಲು ತಿಳಿಸಲಾಯಿತು. ಆ ಘಟನೆಯ ಸಂಬಂಧ ಸಮಾಚಾರ ತಿಳಿದ ಕೂಡಲೇ ತಕ್ಷಣ ನಾನು ಪೋಲೀಸ್ ಡೈರೆಕ್ಟರ್ ಜನರಲ್ ಅವರನ್ನು ಬಳ್ಳಾರಿಗೆ ತೆರಳಲು ಹೇಳಿದೆ. ಅವರು ೧೭ನೇ ಫೆಬ್ರುವರಿ ೧೯೮೩ರ ಬೆಳಿಗ್ಗೆ ಬಳ್ಳಾರಿಗೆ ತಲುಪಿದರು. ನಾನು ಡಿವಿಜನಲ್ ಕಮೀಷನರ್, ಗುಲ್ಬರ್ಗ ಇವರನ್ನು ಕೂಡ ಬಳ್ಳಾರಿಗೆ ತೆರಳಲು ಮತ್ತು ಈ ಘಟನೆಗಳ ಬಗ್ಗೆ ವಿಚಾರಿಸಲು ಹೇಳಿದೆ. ಅವರು ಕೂಡ ೧೭ನೇ ಫೆಬ್ರುವರಿ ೧೯೮೩ರ ಬೆಳಿಗ್ಗೆ ಬಳ್ಳಾರಿಗೆ ತೆರಳಿದರು. ನನ್ನ ಕೋರಿಕೆಯ ಮೇರೆಗೆ ಸಾರಿಗೆ ರಾಜ್ಯ ಮಂತ್ರಿಗಳು ಮತ್ತು ಕಾರ್ಮಿಕರ ಮತ್ತು ವಕ್ಫ ಮಂತ್ರಿಗಳು ೧೭ನೇ ಫೆಬ್ರುವರಿ ೧೯೮೩ ರಂದು ಬಳ್ಳಾರಿಗೆ ಭೇಟಿ ಇತ್ತರು.

೩. ೧೭ನೇ ಫೆಬ್ರುವರಿ ೧೯೮೩ ರಂದು ಕಾಲೇಜು ವಿದ್ಯಾರ್ಥಿಗಳು ಒಂದು ಗುಂಪು ಮೆರವಣಿಗೆಯನ್ನು ಹೊರಡಿಸಿತು ಮತ್ತು ಒಂದು ಗುಂಪು ಪೋಲೀಸ್ ಲೈನ್ಸ್‌ನಲ್ಲಿ ನುಗ್ಗಲು ಪ್ರಯತ್ನಿಸಿತು ಅವರು ಒಂದು ಪೋಲೀಸ್ ತಂಡದ ಮೇಲೆ ದಾಳಿಮಾಡಿದರೂ ಎಂದು ವರದಿಯಾಗಿದೆ. ಗುಂಡು ಹಾರಿಸುವುದನ್ನು ಕೈಗೊಳ್ಳಲಾಯಿತು. ಪರಿಣಾಮವಾಗಿ ಒಬ್ಬನು ಮೃತಪಟ್ಟನು ಮತ್ತು...

SRI M. RAMAPPA.—No Sir, that is on 16th.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸರಿ, ಇದರಿಂದ ಇಬ್ಬರಿಗೆ ಗಾಯವುಂಟಾಯಿತಂ. ಜನರ ಗುಂಪು ೩ ಪೆಟ್ರೋಲ್ ಬಂಕ್‌ಗಳನ್ನು ಸುಟ್ಟರು ಮತ್ತು ಹೋಟೆಲು, ಆಂಗಡಿಗಳು, ಸಿನಿಮ ಥೀಯೇಟರುಗಳು ಇಂತಹ ಕಟ್ಟಡಗಳನ್ನು ಹಾನಿಗೊಳಿಸಿತು. ಅವರು ಕಲ್ಲುಗಳನ್ನು ತೂರಿದರು ಮತ್ತು ಬೇರೆ ಭಾಗಗಳಲ್ಲಿರುವ ಪೋಲೀಸ್ ಠಾಣೆಗಳನ್ನು ಹಾನಿಗೊಳಿಸಿದರಂ. ಜನರನ್ನು ನಿಯಂತ್ರಣದಲ್ಲಿಡಲು ಇತರ ಪ್ರಯೋಗಳಂ ಅಸಫಲವಾದ ಕಾರಣ ಪೋಲೀಸರು ಗುಂಡು ಹಾರಿಸಬೇಕಾಯಿತು. ಕರ್ನಾಟಕ ಪೋಲೀಸ್ ಕಾಯಿದೆ ಕಲಂ ೫೫ರ ಅನ್ವಯ ಹುಕುಂನ್ನು ಜಾರಿ ಮಾಡಲಾಯಿತು. ೧೮ನೇ ಫೆಬ್ರುವರಿ ೧೯೮೩ ರಂದು ಸಮಾಜ ಘಾತುಕ ವ್ಯಕ್ತಿಗಳು, ಕೈಗಾರಿಕೆಗಳಂ, ಬ್ಯಾಂಕುಗಳು ಮತ್ತು ಇತರ ಸ್ಥಳಗಳ ಮೇಲೆ ದಾಳಿಯಲ್ಲಿ ತೊಡಗಿದರು. ಪುಂಡರ ಒಂದು ಗುಂಪು ಆಂಧ್ರ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕ್‌ಗಳ ಕಾಗದ ಪತ್ರಗಳಿಗೆ ಬೆಂಕಿ ಹಚ್ಚಿದರು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಒಂದು ಭಾಗವನ್ನು ಹಾನಿಗೊಳಿಸಿದರು. ಸಾಕಷ್ಟು ಪೋಲೀಸ್ ದಳಗಳನ್ನು ಕಳುಹಿಸಲಾಯಿತು, ತೀವ್ರ ಗಸ್ತಿನ ವ್ಯವಸ್ಥೆಯನ್ನು ಮಾಡಲಾಯಿತು.

೪. ೧೬ನೇ ಫೆಬ್ರುವರಿ ೧೯೮೩ ರಂದು ಕರ್ಫ್ಯೂ ಘೋಷಿಸಲಾಯಿತು ಮತ್ತು ಅದನ್ನು ನಂತರ ದಿವಸಗಳಲ್ಲಿ ಜಾರಿಗೆ ಇಡಲಾಯಿತು. ೩೨ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಯಿತು ಮತ್ತು ೧೦೩ ಜನರನ್ನು ಬಂಧಿಸಲಾಯಿತು. ಪೋಲೀಸ್ ಗೋಲೀಬಾರಿನಲ್ಲಿ ೬ ಜನರು ಮೃತ ಪಟ್ಟರು ಮತ್ತು ೫೩ ಜನರು ಗಲಭೆಗಳಲ್ಲಿ ಗಾಯಗೊಂಡರು.

೫. ೧೯ನೇ ಫೆಬ್ರುವರಿ ೧೯೮೩ ರಂದು ಬಳ್ಳಾರಿಗೆ ಭೇಟಿ ಕೊಟ್ಟೆನು. ಸಂಪುಟದ ದರ್ಜೆಯ ಮಂತ್ರಿಗಳಾದ ಶ್ರೀಮಾನ್ ಬೊಮ್ಮಾಯಿ ಮತ್ತು ನಜೀರ್ ಸಾಬ್ ಅವರು ನನ್ನ ಜೊತೆಗೆ ಇದ್ದರು. ನಾವು ಆಸ್ಪತ್ರೆಗೆ ಭೇಟಿ ಕೊಟ್ಟೆವು ಮತ್ತು ಗಾಯಗೊಂಡ ಜನರನ್ನು ಮತ್ತು ಅವರನ್ನು ನೋಡಿಕೊಳ್ಳುವ ವೈದ್ಯರನ್ನು ಕಂಡು ಮಾತನಾಡಿದೆವು. ನಾವು ಸರಿಯಾದ ವೈದ್ಯಕೀಯ ಚಿಕಿತ್ಸೆಗೆ ಆಗಬೇಕಾದ ಎಲ್ಲಾ ಏರ್ಪಾಡುಗಳು ಸರ್ಕಾರಿ ಆಸ್ಪತ್ರೆ ವೈದ್ಯರು ತೆಗೆದುಕೊಳ್ಳುವ ಹಾಗೆ ನೋಡಿಕೊಂಡೆವು. ಒಂದು ಪ್ರಕರಣದಲ್ಲಿ ಒಬ್ಬ ಗಾಯಗೊಂಡವನನ್ನು ಬೆಂಗಳೂರಿಗೆ ಚಿಕಿತ್ಸೆಗಾಗಿ ವೈದ್ಯಕೀಯ ಸಲಹೆಯ ಮೇರೆಗೆ ನಾನು ಆತನನ್ನು ಬಳ್ಳಾರಿಯಿಂದ ಬೆಂಗಳೂರಿಗೆ ಹೆಲಿಕ್ಯಾಪ್ಟರ್ ಮುಖಾಂತರ ಕಳುಹಿಸುವ ವ್ಯವಸ್ಥೆ ಮಾಡಿದೆ. ಹಾಗೆ ನಾನು ಬಳ್ಳಾರಿ ಜನರ ಪ್ರತಿನಿಧಿಗಳನ್ನು ಭೇಟಿ ಮಾಡಿದೆ ಮತ್ತು ಅವರ ಅಹವಾಲನ್ನು ಕೇಳಿಕೊಂಡೆನು. ಸಾಮಾನ್ಯ ಪರಿಸ್ಥಿತಿಯನ್ನು ಹೊಂದಿಸುವುದಕ್ಕೆ ಮಾಡಬೇಕಾದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದೆನು.

೬. ನಾವು ಗಾಯಾಳುಗಳ ಮತ್ತು ನಿಧನ ಹೊಂದಿದವರ ಕುಟುಂಬಗಳವರಿಗೆ ಪರಿಹಾರ ಧನವನ್ನು ಮಂಜೂರು ಮಾಡುವುದಕ್ಕೆ ಶೀಘ್ರ ಕ್ರಮಗಳನ್ನು ಕೈಗೊಂಡೆವು. ಬಳ್ಳಾರಿಯಲ್ಲಿ ನಡೆದ ಘಟನೆಗಳ ಬಗ್ಗೆ ಸೂಕ್ತ ರೀತಿಯ ನ್ಯಾಯಾಂಗ ತನಿಖೆ ನಡೆಸಲು ಕೂಡ ನಿರ್ಣಯ ತೆಗೆದುಕೊಂಡೆವು. ಪೋಲೀಸ್ ಠಾಣೆಯಲ್ಲಿ ನಡೆಯಿತಂ ಎನ್ನಲಾದ ಪೂನಪಾನಿಯ ಘಟನೆಗಳ ಬಗ್ಗೆ ಗುಪ್ತ ದಳದವರು ತನಿಖೆ ಮಾಡಿದ್ದಾರೆ ಮತ್ತು ಒಬ್ಬ ಸಬ್ ಇನ್ಸ್‌ಪೆಕ್ಟರ್, ೨ಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ೪ ಜನ ಕಾನ್‌ಸ್ಟೇಬಲ್‌ನ್ನು ಬಂಧಿಸಿದ್ದಾರೆ. ಆಪಾದಿತ ಪೋಲೀಸ್ ಸಿಬ್ಬಂದಿಯ ಮೇಲೆ ಮೊಖದ್ದಮೆ ಹೂಡಲಂ ಮಂಜೂರು ನೀಡಲಾಗುತ್ತದೆ.

೭. ಬಳ್ಳಾರಿ ನಗರದಲ್ಲಿ ನಡೆದ ನತದೃಷ್ಟ ಘಟನೆಗಳಂ ಆ ಭಾಗದಲ್ಲಿ ಕಾನೂನು ಮತ್ತು ಶಿಸ್ತು ಮತ್ತು ಅಪರಾಧಗಳ ಸ್ಥಿತಿಯ ಮೇಲೆ ಬಲವಾದ ಹತೋಟಿಯ ಅವಶ್ಯಕತೆ ಇರುತ್ತದೆ. ನಾನು ಅವಶ್ಯಕವಾದ ಸುಧಾರಣಾ ಕ್ರಮಗಳನ್ನು ಪ್ರಾರಂಭಿಸಿದ್ದೇನೆ. ಈಗ ಪರಿಸ್ಥಿತಿ ಸರ್ವಸಾಮಾನ್ಯವಾಗಿದೆ. ಇದು ಆದ ಮೇಲೆ ಸಾರ್ವಜನಿಕ ಮುಖಂಡರನ್ನು ಭೇಟಿಯಾಗಿದ್ದೇನೆ. ಅಲ್ಲಿ ಶಾಂತ ಪರಿಸ್ಥಿತಿ ಉಂಟಾದ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಯಾರ್ಯಾರು ಗಾಯಗೊಂಡಿದ್ದಾರೆ, ಮೃತಪಟ್ಟಿದ್ದಾರೆ ಅವರಿಗೆ ಪರಿಹಾರವನ್ನು ಕೂಡ ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಇಷ್ಟು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಯಾರದು ತಪ್ಪಾಗಿದೆ, ಎಷ್ಟು ತಪ್ಪಾಗಿದೆ ಪೋಲೀಸರ ಕ್ರಮ ಆದು ಉಚಿತವಾಗಿತ್ತೇ ಇಲ್ಲವೇ, ಗುಂಡು ಹಾರಿಸಿದ್ದು ಸರಿಯಾಗಿತ್ತೇ ಈ ಎಲ್ಲಾ ವಿಚಾರಗಳನ್ನು ಈ

ಸಂದರ್ಭದಲ್ಲಿ ಚರ್ಚೆ ಮಾಡತಕ್ಕಂತಹದ್ದು ಸರಿಯಲ್ಲ. ಏಕೆಂದರೆ ಇದು ತನಿಖೆಗೆ ಒಳಗೊಂಡಂತಹವಿಚಾರ ಒಬ್ಬ ಪೋಲೀಸ್ ಪೇದೆಯ ಮೇಲೆ ತತ್‌ಕ್ಷಣ ಕ್ರಮ ಕೈಗೊಂಡು ಅಮಾನತ್‌ನಲ್ಲಿಟ್ಟರು. ಅತ್ಯಾಚಾರಕ್ಕೆ ಒಳಗಾಗಿದ್ದಂತಹ ಮಹಿಳೆ ಹೇಳಿಕೆ ಕೊಟ್ಟಮೇಲೆ ಕೇಸನ್ನು ದಾಖಲೆ ಮಾಡಿಕೊಂಡು, ಅತ್ಯಾಚಾರಕ್ಕೆ ಬಲಾತ್ಕಾರ ಮಾಡಿದವರನ್ನು ಅರೆಸ್ಟ್ ಮಾಡಿ ಇವತ್ತೂ ಕೂಡ ಅವರು ಅರೆಸ್ಟ್‌ನಲ್ಲಿದ್ದಾರೆ. ನಾನು ಬಳ್ಳಾರಿಗೆ ಭೇಟಿ ಕೊಟ್ಟಮೇಲೆ ಒಬ್ಬ ಪೋಲೀಸ್ ಅಧಿಕಾರಿಯನ್ನು ಅಮಾನತ್‌ಗೊಳಿಸಲಾಗಿದೆ. ನಾನು ಅಲ್ಲಿಗೆ ಹೋದ ತಕ್ಷಣ ಈ ವಿಚಾರದಲ್ಲಿ ಯಾವ್ಯಾವ ಪೋಲೀಸ್ ಅಧಿಕಾರಿಗಳಿಗೆ ಸಂಬಂಧವಿದೆ ಎನ್ನುವುದನ್ನು ತನಿಖೆ ಮಾಡಲಿಕ್ಕೆ ಸಿ.ಓ.ಡಿ.ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಅವರು ಮಾರನೆಯ ದಿವಸವೇ ಕೆಲಸವನ್ನು ಶುರು ಮಾಡಿದರು. ತನಿಖೆಯ ಆಧಾರದ ಮೇಲೆ ಇನ್ನುಳಿದ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಂ ಹೇಳಿದಂತೆ ಇದು ಮಹತ್ವವಾದಂತ ವಿಚಾರ. ನಿಜವಾಗಿಯೂ ಮಹತ್ವದ್ದೆ, ಆರು (೬) ಜನರ ಪ್ರಾಣ ಹೋಗಿದೆ. ಗೋಲಿಬಾರ್ ಮಾಡುವುದಿಲ್ಲವೆಂದು ಹೇಳಿ, ಗೋಲಿಬಾರ್ ಮಾಡಿದ್ದಾರೆಂದು ಹೇಳಿದರು. ಅದು ನಿಜ, ಗೋಲಿಬಾರನ್ನು ಎಂತಹ ಪ್ರಸಂಗದಲ್ಲೂ ಮಾಡುವುದಿಲ್ಲವೆಂದು ನಾವು ಹೇಳಿಲ್ಲ. ಹಿಂದೆ ಗೋಲೀಬಾರ್ ಮಾಡುವುದು ಸಾಮಾನ್ಯ ಘಟನೆಯಾಗಿತ್ತು. ಆ ರೀತಿ ಗೋಲೀಬಾರ್ ಮಾಡುವುದಿಲ್ಲ, ಮತ್ತು ಅದು ಸರ್ಕಾರದ ನೀತಿಯೂ ಅಲ್ಲ. ಗೋಲಿಬಾರ್ ಮಾಡುವುದಿಲ್ಲವೆಂದು ನಾವು ಹೇಳಿದ್ದೇವೆ. ಇಂತಹ ದುಃಖಿಕರವಾದಂತಹ ಪ್ರಸಂಗದಲ್ಲೂ ಕೂಡ ನನ್ನ ಮನಸ್ಸಿಗೆ ವೇದನೆ ಏನಾಗುತ್ತಿದೆ ಅಂದರೆ, ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಹಿಂದೆ ನಡೆದಂತಹ ಘಟನೆಗಳನ್ನು ಇಷ್ಟು ಬೇಗ ಮರೆತಿದ್ದಾರಲ್ಲ ಎಂದು. ಇದೊಂದು ಸಾರಿ ಆಗಬಾರದ ಘಟನೆಯಾಯಿತು. ಅದಕ್ಕೆ ಎಷ್ಟೊಂದು ಆವೇಶದಿಂದ ಎಷ್ಟೊಂದು ಉಗ್ರವಾಗಿ ಸರ್ಕಾರವನ್ನು ಟೀಕೆ ಮಾಡಿದರು ಟೀಕೆ ಮಾಡಲಿಕ್ಕೆ ಅವರಿಗೆ ಹಕ್ಕು ಇದೆ. ಆ ಹಕ್ಕನ್ನು ನಾವು ಕಸಿದುಕೊಳ್ಳುವುದಕ್ಕಾಗುವುದಿಲ್ಲ, ಹಕ್ಕಿನ ಬಗ್ಗೆ ನಾನು ಟೀಕೆ ಮಾಡುವುದಿಲ್ಲ. ನನಗೆ ಒಂದೊಂದು ಸಲ ಆಶ್ಚರ್ಯವಾಗುತ್ತದೆ, ಮಂತ್ತು ಒಂದೊಂದು ಸಲ ವ್ಯಥೆಯೂ ಆಗಂತ್ತದೆ. ಕಳೆದ ಎರಡೂವರೆ ವರ್ಷಗಳಲ್ಲಿ ಸುಮಾರು ೧೩೯ಜನ ರೈತರ ಪ್ರಾಣ ಗೋಲೀಬಾರ್‌ನಿಂದ ಹೋಗಿದೆ. ಆಗ ಇವರಿಗೆ ಕಣ್ಣಿನಿಂದ ಒಂದು ಹನಿ ನೀರು ಬೀಳಲಿಲ್ಲ. ನರಗುಂದದಲ್ಲಿ ನಡೆದಂತಹ ಅನಾಹುತದ ಬಗ್ಗೆ ಚರ್ಚೆ ಮಾಡಲಿಕ್ಕೆ ಸದನದಲ್ಲಿ ಅವಕಾಶ ಕೊಡಲಿಲ್ಲ. ನ್ಯಾಯಾಂಗ ತನಿಖೆ ಮಾಡಿಅಂದರೆ ಇವರು ಕೇಳಲಿಲ್ಲ ಅದೇರೀತಿ ನಿಪ್ಪಾಣಿಯಲ್ಲಿ ಏನಾಯಿತು? ಅಲ್ಲೇನು ಕಡಿಮೆ ಜನ ಸತ್ತಿದ್ದಾರೇನು? ಅಲ್ಲೂ ಕೂಡ ೮-೧೦ ಜನ ಸತ್ತಿದ್ದಾರೆ. ಅಂದಿನ ವಿರೋಧ ಪಕ್ಷದವರು ನ್ಯಾಯಾಂಗ ತನಿಖೆ ಮಾಡಬೇಕೆಂದು ಧರಣಿ ಕೂತಾಗ ಒಪ್ಪದಂತಹವರು ಇವತ್ತು ನ್ಯಾಯಾಂಗ ತನಿಖೆ ಮಾಡಲು ಅವಕಾಶ ಮಾಡಿರತಕ್ಕ ವಿಚಾರದ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಅದನ್ನು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರ ಹೇಳಲಿಕ್ಕೆ ಬಯಸುತ್ತೇನೆ. ಸರ್ಕಸ್ ದುರಂತ ಆಯಿತು, ಕಳ್ಳಭಟ್ಟಿ ದುರಂತ ಆಯಿತು, ಅದರಲ್ಲಿ ಎಷ್ಟು ಜನ ಸತ್ತರು? ಅಲ್ಲೂ ಕೂಡ ನ್ಯಾಯಾಂಗ ತನಿಖೆ ಮಾಡಬೇಕೆಂದು ವಿರೋಧ ಪಕ್ಷದವರು ಧರಣಿ ಕುಳಿತು ಪಟ್ಟು ಹಿಡಿದ ಮೇಲೆ ನ್ಯಾಯಾಂಗ ತನಿಖೆ ಮಾಡಲು ಆಜ್ಞೆ ಮಾಡಿದರು. ನ್ಯಾಯಾಂಗ ತನಿಖೆ ಮಾಡಿದರೂ, ರಿಪೋರ್ಟ್ ಬಂದರೂ ಅವನ್ನು ಬಚ್ಚಿಟ್ಟರು. ನ್ಯಾಯಾಂಗ ತನಿಖೆಯ ವರದಿಯನ್ನು ನಾವು ಬೆಳಕಿಗೆ ತರಬೇಕಾಯಿತು, ನಮ್ಮ ಸರ್ಕಾರ ಬರದಿದ್ದರೆ ಆ ವರದಿ ಭೂಗರ್ಭದಲ್ಲಿ ಅಡಗಿ ಹೋಗುತ್ತಿತ್ತು. ಇಂತಹವರಿಗೆ ಈ ರೀತಿ ಕೇಳಲು ಯಾವ ನೈತಿಕ ಹಕ್ಕು ಇದೆ?. ತನಿಖೆಯಾದ ವರದಿಯನ್ನು ಮುಚ್ಚಿಟ್ಟಂತಹ ಇವರಿಗೆ ಏನು ಹೇಳಬೇಕು? ಮಾತನಾಡುವುದಕ್ಕೂ ಒಂದು ನೈತಿಕ ಹಕ್ಕು ಬೇಕು. ಅದು ಸಹ ಇವರಿಗೆ ಇಲ್ಲ ಎನ್ನುವ ಸಂದೇಹ ನನಗಿದೆ. ದೇಶದ ಜನ ಬೇರೆ ಅಲ್ಲ, ನಾವು ಬೇರೆ ಅಲ್ಲ. ಪ್ರಜೆಗಳನ್ನು ರಕ್ಷಿಸತಕ್ಕದ್ದು ಸರ್ಕಾರದ ಕರ್ತವ್ಯ. ಮಾನ್ಯ ಅಧ್ಯಕ್ಷರೇ ಪುನಃ ಹೇಳುತ್ತೇನೆ ಸರ್ಕಾರಕ್ಕೆ ಈ ಘಟನೆಯಿಂದ ಅತ್ಯಂತ ಖೇದವಾಗಿದೆ. ಗೋಲೀಬಾರ್ ಮಾಡದಿರುವುದು ನಮ್ಮ ನೀತಿಯೂ ಹೌದು, ಆದರೆ ನಾವು ಅನಾವಶ್ಯಕವಾಗಿ ಗೋಲೀಬಾರ್ ಮಾಡುವುದಿಲ್ಲ. ಅನಗತ್ಯವಾಗಿ ಒಂದು ಪ್ರಾಣವನ್ನು ತೆಗೆಯಕೂಡದು. ಅದು ಅಮಾನುಷವಾದುದು, ಯಾರೇ ಸಾಯಲಿ ಅವರ ಮನೆಯವರ ಗತಿಯೇನು? ಅದಕ್ಕಾಗಿ ನಾವು ಹೊಸ ನೀತಿಯನ್ನು ಮಾಡಿಕೊಂಡಿದ್ದೇವೆ. ನಾವು ಗುಂಡು ಹಾರಿಸುವಂತಹ ಉಗ್ರಕ್ರಮ ತೆಗೆದುಕೊಳ್ಳುವುದಿಲ್ಲ. ಆಲ್ಲಿ ಕೋಮುವಾರು ಘರ್ಷಣೆ ಆಗಿರಬಹದು, ಆದರೆ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ನಷ್ಟವುಂಟು

ಮಾಡುವವರ ಮೇಲೆ ಉಗ್ರವಾದಂತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ನ್ಯಾಯಾಂಗ ತನಿಖೆ ಅತೀ ಶೀಘ್ರವಾಗಿ ತುರುವಾಗುತ್ತದೆ. ನಾವು ಉಚ್ಚ ನ್ಯಾಯಾಲಯಕ್ಕೆ ಬರೆದಿದ್ದೇವೆ ಅಲ್ಲಿಂದ ಇವತ್ತೋ ನಾಳೆಯೋ ಉತ್ತರ ಬರಬಹುದು. ಆ ವಿಷಯವನ್ನು ಬಹಿರಂಗಪಡಿಸುವುದಕ್ಕೆ ಆಗುವುದಿಲ್ಲ. ಅದು ಅತೀ ಶೀಘ್ರವಾಗಿ ಆಗುತ್ತದೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ)—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿಯ ಘಟನೆಯ ಬಗ್ಗೆ ಬಹಳ ದೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ ಬಳ್ಳಾರಿ ಘಟನೆ ಬಹಳ ಪ್ರಾಮುಖ್ಯತೆ ಪಡೆಯಿತು ಎನ್ನುವುದನ್ನು ನಾವೆಲ್ಲರೂ ಈಗಾಗಲೇ ಮನವರಿಕೆ ಮಾಡಿಕೊಂಡಿದ್ದೇವೆ. ನಮ್ಮ ರಾಜ್ಯದ ಜನರೂ ಸಹ ಮನವರಿಕೆ ಮಾಡಿಕೊಂಡಿದ್ದಾರೆ. ಅತಿ ಮುಖ್ಯವಾಗಿ ಇಲ್ಲಿ ಅನೇಕ ಪ್ರಶ್ನೆಗಳು ಉದ್ಭವಾಗುತ್ತವೆ, ಸಾಮಾನ್ಯ ವೆಲ್ಡರ್ ಮಗಳ ಮೇಲೆ ಪೋಲೀಸ್ ರಾಣಿಯಲ್ಲಿ ಅತ್ಯಾಚಾರ ನಡೆದಿರುವುದೂ ನಿಜವೇ, ಇಲ್ಲವೇ ಎನ್ನುವುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡಿರುವುದು ತುಂಬಾ ಸಂತೋಷದ ವಿಚಾರ. ಇದನ್ನು ನಾನೂ ಸ್ವಾಗತಿಸುತ್ತೇನೆ. ಹಿಂದೆ ಆಡಳಿತ ಪಕ್ಷದಲ್ಲಿದ್ದಂತಹವರು ನ್ಯಾಯಾಂಗ ತನಿಖೆ ಮಾಡಲಿಕ್ಕೆ ಸಿದ್ಧರಿರಲಿಲ್ಲ. ಇವತ್ತು ಇವರು ಬಂದು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದರು. ಅದರ ಬಗ್ಗೆ ಪ್ರಶ್ನೆ ಮಾಡತಕ್ಕದ್ದು ಅಷ್ಟು ನ್ಯಾಯ ಸಮ್ಮತವಲ್ಲ. ಇದು ಸರಿಯಾದುದಲ್ಲ. ನಮ್ಮ ಪ್ರಜಾಪ್ರಭುತ್ವದಲ್ಲಿ ಕೆಲವಾರು ಮೌಲ್ಯಗಳನ್ನು ಏತ್ತಿ ಹಿಡಿಯಬೇಕಾದುದು ತಮ್ಮ ಕರ್ತವ್ಯ. ಆದರೆ ಹಿಂದಿನ ಸರ್ಕಾರದವರು ಈ ಎಲ್ಲಾ ಮೌಲ್ಯಗಳನ್ನು ಬದಿಗೊತ್ತಿ ಮೂರು ಜನ ಕಾರ್ಮಿಕರನ್ನು ಕೊಂದಿದ್ದಾರೆ. ಈ ಮೂರು ಜನರಲ್ಲಿ ಒಬ್ಬರು ಡಾಕ್ಟರ್ ಮತ್ತು ಇನ್ನು ಇಬ್ಬರು ನೌಕರರು. ಇವರ ಬಗ್ಗೆ ಹಿಂದಿನ ಸರ್ಕಾರದ ಮಂತ್ರಿಗಳಿಗೆ ಕಾಳಜಿ ಇರಲಿಲ್ಲ. ಆಗ ಈ ಪ್ರಶ್ನೆಯೆ ಸದನದಲ್ಲಿ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಸುಮಾರು ಎರಡೂವರೆ ವರ್ಷದಲ್ಲಿ ೧೫೯ ಜನರ ಮೇಲೆ ಗೋಲೀಬಾರ್ ಮಾಡಿದಾಗ ಅವರ ಬಗ್ಗೆ ಹಿಂದಿನ ಸರ್ಕಾರಕ್ಕೆ ಕಾಳಜಿ ಇರಲಿಲ್ಲ. ಆದರೆ ಈಗ ಬಳ್ಳಾರಿಯಲ್ಲಿ ನಡೆದ ಘಟನೆಯ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಿಗೆ ಕಾಳಜಿ ಬಂದಿದೆ ಅದು ಬಹಳ ಸಂತೋಷ. ಆದರೆ ಅದನ್ನೇ ಒಂದು ದೊಡ್ಡ ಪ್ರಶ್ನೆಯನ್ನಾಗಿ ಮಾಡಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದೂ ನಿಲುವಳಿ ಸೂಚನೆಯನ್ನು ತಂದಿರುವುದು ಸೂಕ್ತವಲ್ಲವೆಂದು ನಾನೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಒಬ್ಬ ಮಹಿಳೆಯ ಮೇಲೆ ಪೋಲೀಸಿನವರು ಅತ್ಯಾಚಾರ ಮಾಡಿದ್ದಾರೆ. ಆದರೆ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರೆ ಅದು ರೇಪ್ ಆಗುತ್ತದೆ. ಆದರೆ ಅನೇಕರು ಸೇರಿ ಅತ್ಯಾಚಾರ ಮಾಡಿದರೆ ಗ್ಯಾಂಗ್ ರೇಪ್ ಎಂದು ಹೇಳಬೇಕಾಗುತ್ತದೆ. ಯಾರು ಕಾನೂನು ಪಾಲನೆ ಮಾಡಬೇಕಾಗಿದಿಯೋ. ಯಾರು ಕಾನೂನನ್ನು ರಕ್ಷಣೆ ಮಾಡುತ್ತಾರೋ, ಯಾರು ಹಿಂದುಳಿದ ವರ್ಗಗಳಿಗೆ ರಕ್ಷಣೆ ಕೊಡಬೇಕಾಗಿತ್ತೋ ಅವರೇ ಇಂಥ ಕೆಲಸ ಮಾಡಿದರೆ ಇದರ ಅರ್ಥವೇನು ? ಈ ಒಂದು ಕೆಲಸವನ್ನು ಪೋಲೀಸ್ ಅಧಿಕಾರಿಗಳೇ ಮಾಡಿರಲಿ, ಪೋಲೀಸ್ ಪೆದೆಗಳೇ ಮಾಡಿರಲಿ, ಯಾರೇ ಮಾಡಿರಲಿ ಇದು ಅಕ್ಷಮ್ಯ ಅಪರಾಧವೆಂದು ನನಗನಿಸುತ್ತದೆ. ಇಂಥವರಿಗೆ ತಕ್ಕ ಶಿಕ್ಷೆಯಾಗಲಿಬೇಕು. ಯಾರಿಗೆ ಇವತ್ತು ಅನ್ಯಾಯವಾಗಿದೆಯೋ ಅಂಥವರಿಗೆ ನ್ಯಾಯವನ್ನು ಒದಗಿಸಿಕೊಡಬೇಕಾಗುತ್ತದೆ. ಮತ್ತೆ ಈ ವಿಚಾರದಲ್ಲಿ ಎರಡು ಮೂರು ಪ್ರಶ್ನೆಗಳು ಉದ್ಭವವಾಗುತ್ತವೆ. ಮೊದಲನೆಯ ಪ್ರಶ್ನೆ ಏನೆಂದರೆ ದಿನಾಂಕ ೧೪-೨-೧೯೮೩ ರಂದು ಈ ಘಟನೆ ನಡೆದಿದೆ. ಆದರೆ ೧೫-೨-೮೩ ರವರೆಗೂ ಪೋಲೀಸಿನವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಮತ್ತೆ ೧೬ ನೇ ತಾರೀಖು ಕೂಡ ಪೋಲೀಸಿನವರು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ ಅಲ್ಲಿರುವಂತಹ ಪೋಲೀಸಿನವರೂ ಎರಡು ದಿವಸಗಳಾದರೂ ಏತಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ ? ಇದು ಸರಿಯೇ ? ಅಷ್ಟು ಮಾತ್ರವಲ್ಲ ಇನ್ನೂ ಒಂದು ಮಾತನ್ನು ಹೇಳುವುದಾದರೆ ಎರಡು ದಿವಸಗಳ ನಂತರ ಡಿ. ಐ.ಜಿ.ಯವರನ್ನು ಕಳುಹಿಸಿಕೊಟ್ಟಿದ್ದೀರಿ. ಆದರೆ ಆ ಎರಡು ದಿವಸಗಳವರೆಗೆ ಡಿ. ಐ. ಜಿ. ಯವರಿಗೆ ಈ ವಿಷಯ ಗೊತ್ತಿರಲಿಲ್ಲವೇ. ತಾವು ಡಿ. ಐ. ಜಿ. ಯವರನ್ನು ಕಳುಹಿಸಿ ಕೊಟ್ಟ ದಿವಸವೇ ತಲುಪಿದರೋ ಇಲ್ಲವೋ ಕೇಳಬೇಕಾಗಿದೆ. ಈ ಘಟನೆ ನಡೆದಿರುವುದು ತಮಗೆ ಗೊತ್ತಾಗಲಿಲ್ಲವೇ ? ತಾವು ಈ ಖಾತೆಯನ್ನು ವಹಿಸಿಕೊಂಡಿದ್ದೀರಿ. ಈ ವಿಷಯ ತಮಗೆ ಯಾವಾಗ ತಿಳಿಯಿತು. ತಾವು ಬಳ್ಳಾರಿಗೆ

ಯಾವಾಗ ಡಿ. ಐ. ಜಿ. ಯವರನ್ನು ಕಳುಹಿಸಿಕೊಟ್ಟಿರಿ. ಎಂಬುದನ್ನು ತಿಳಿಸಬೇಕು. ಡಿ. ಐ. ಜಿ. ಯವರು ಬಳ್ಳಾರಿಗೆ ಹೋಗಿದ್ದರೋ ಇಲ್ಲವೋ ಅಥವಾ ಮನೆಯಲ್ಲಿಯೇ ಇದ್ದರೋ ಎಂಬುದು ನಮಗೆ ತಿಳಿಸಬೇಕು. ತಾವು ನ್ಯಾಯಾಂಗ ವಿಚಾರಣೆ ಮಾಡತಕ್ಕಂಥಾದ್ದು ಬೇರೆ ವಿಚಾರ, ಆದರೆ ಈ ಘಟನೆ ನಡೆದ ಎರಡು ದಿವಸಗಳವರೆಗೆ ಪೋಲೀಸಿನವರು ಯಾವ ಕ್ರಮವನ್ನು ತೆಗೆದುಕೊಳ್ಳದೆ ಇರುವುದು ಬಹಳ ಆಕ್ರಮ ವಂತ್ತು ಅಕ್ಷಮ್ಯ. ಇದರಲ್ಲಿ ಯಾರು ತಪ್ಪು ಮಾಡಿದ್ದರೂ ಕೂಡ ಅವರಿಗೆ ಸರಿಯಾದ ಶಿಕ್ಷೆಯಾಗಬೇಕು, ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದಂಥ ಘಟನೆಯ ಬಗ್ಗೆ ಪೋಲೀಸಿನವರು ಯಾವಾಗ ಎಫ್. ಐ. ಆರ್. ಅನ್ನು ಫೈಲ್ ಮಾಡಿದರು. ? ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅಲ್ಲಿ ಘಟನೆ ನಡೆದ ೩೦ ಗಂಟೆಗಳ ಮೇಲೆ ಎಫ್. ಐ ಆರ್. ಫೈಲ್ ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ಇದರ ಅರ್ಥವೇನೆಂದರೆ ಈ ಘಟನೆಯನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಉದ್ದೇಶ ಪೂರ್ವಕವಾಗಿಯೇ ಪೋಲೀಸಿನವರು ಮಾಡಿದ್ದಾರೆಂದು ನಮಗೆ ತಿಳಿದು ಬರುತ್ತದೆ. ಈ ರೀತಿ ೩೦ ಘಂಟೆಗಳಾದ ಮೇಲೆ ಪೋಲೀಸಿನವರು ಎಫ್. ಐ. ಆರ್ ಫೈಲ್ ಮಾಡುವುದಕ್ಕೆ ಕಾರಣವೇನು ಎನ್ನುವುದಕ್ಕೆ ವಿವರಣೆಯನ್ನು ಕೊಡಬೇಕು. ಇನ್ನೊಂದು ಮುಖ್ಯವಾದ ವಿಷಯವೆಂದರೆ ಆ ಹೆಣ್ಣು ಮಗಳ ಮೇಲೆ ಅತ್ಯಾಚಾರ ನಡೆದು ಆಕೆಯನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಪಡೆಯುತ್ತಿದ್ದಾಗ ಹೇಳಿದ್ದಾರೆ, ನೀವು ಯಾರ ಮೇಲೂ ಕಂಪ್ಲೆಂಟ್ ಕೊಡಬಾರದೆಂ, ಎಂದು ಆಕೆಯನ್ನು ಹೆದರಿಸಿದ್ದಾರೆ, ಮತ್ತು ಬೆದರಿಕೆಯನ್ನು ಸಹ ಹಾಕಿದ್ದಾರೆ. ಇದು ನನ್ನ ಗಮನಕ್ಕೆ ಬಂದಿದೆ. ಇದು ಮಹಿಳಾ ಅತ್ಯಾಚಾರವೆಂದು ನನಗನಿಸುತ್ತದೆ. ಈ ದುರ್ಘಟನೆ ನಡೆದ ಮೇಲೆ ಆಕೆಯ ಮೇಲೆ ಬೆದರಿಕೆ ಹಾಕುವುದಾಗಲಿ ಹೆದರಿಸುವುದಾಗಲಿ ಸರಿಯಾದುದ್ದಲ್ಲ ವೆಂದು ನಾನು ಹೇಳುತ್ತೇನೆ. ಅಲ್ಲಿ ಯಾವುದೇ ಹಿಂದೂ ಮುಸ್ಲಿಂ ಗಲಭೆಯಾಗಿಲ್ಲ. ಇದು ಸ್ವಾಗತಾರ್ಹ ಆದ್ದರಿಂದ ನಾನಾದರೂ ಕೇಳಂವುದೇನೆಂದರೆ ಈ ಘಟನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಇನ್ನೊಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳಂ ಯಾವ ಒಬ್ಬ ಮಂತ್ರಿಯಂ ಮಾಡದೆ ಇರುವಂತಹ ಕೆಲಸವನ್ನು ಮಾಡಿದ್ದಾರೆ, ಅದು ಏನೆಂದರೆ ಹೆಲಿಕ್ಯಾಪ್ಟರ್ ನಲ್ಲಿ ಬಳ್ಳಾರಿಗೆ ಹೋದಾಗ ನೋವಿನಿಂದ ನರಳುತ್ತಿರುವ ಮನುಷ್ಯರನ್ನು ಹೆಲಿಕ್ಯಾಪ್ಟರ್‌ನಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ ಇದು ಬಹಳ ಸಂತೋಷದ ಸಂಗತಿ. ಇಂತಹ ಒಳ್ಳೆಯ ಕೆಲಸವನ್ನು ಅವರು ಇನ್ನು ಮುಂದೆಯೂ ನಡೆಸಿಕೊಂಡು ಬರಲಿ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಷಯವನ್ನು ನಾನು ಹೇಳುವುದಾದರೆ ಈ ಘಟನೆಯಲ್ಲಿ ದೊಡ್ಡ ದೊಡ್ಡ ಮಟಕಾ ನಡೆಸತಕ್ಕ ಜನರ ಕೈವಾಡವೂ ಇದೆ. ಮಟಕಾ ನಡೆಸತಕ್ಕ ಇವರನ್ನು ಮಟಕ ರಾಜರೆಂದು ಕರೆಯುತ್ತಿದ್ದಾರೆ. ಇವರು ಈ ಕೆಲಸವನ್ನು ನಡೆಸುತ್ತಿದ್ದಾರೆಂದೂ ಗೊತ್ತಾಗಿದೆ. ತಪ್ಪನ್ನು ಕೂಡ ಅವರ ಕಡೆಗೆ ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಾಗಿದೆ. ಈ ಒಂದು ಹಿನ್ನೆಲೆಯಲ್ಲಿ ತಾವು ಇದುವರೆವಿಗೂ ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿಲ್ಲ ಕೆಲವು ರಾಜಕೀಯ ಪಕ್ಷಗಳು ಕೆಲವು ಸಮಾಜ ಘಾತುಕ ಶಕ್ತಿಗಳಂ ಪೂರ್ಣವಾಗಿ ಇದರಲ್ಲಿ ಜವಾಬ್ದಾರಿ ಹೊಂದಿವೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ ಎಲ್ಲಿಯವರೆಗೆ ಈ ಸಮಾಜಘಾತಕ ಶಕ್ತಿಗಳು ಇರುತ್ತವೆಯೋ ಅಲ್ಲಿಯವರೆವಿಗೆ ಈ ರೀತಿಯ ಘಟನೆಗಳಂ ನಡೆಯುತ್ತಿರುತ್ತವೆ. ಆದ್ದರಿಂದ ತಾವು ಇಂತಹ ಸಮಾಜ ಘಾತಕ ಶಕ್ತಿಗಳನ್ನು ಸದೆಬಡಿಯಲೇ ಬೇಕು. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಮಾನ್ಯ ಮಂತ್ರಿಗಳಾದಂಥ ಪ್ರಕಾಶ್‌ರವರು ತಮ್ಮ ಪತ್ರಿಕಾ ಸಂದರ್ಶನದಲ್ಲಿ ಏನು ಹೇಳಿದ್ದಾರೆಂದರೆ "If only there had been a little tact by the police in the beginning, the whole issue would not have been blown up." This is what the Transport Minister Sri Prakash said, ಇದರಲ್ಲಿ ಅನುಸರಿಸಬೇಕು ತಂತ್ರ ಎಂದಿದ್ದಾರೆ What is the tact ? The tact was that they should have gone into action immediately. ಆದ್ದರಿಂದ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡಬೇಕು. ಮತ್ತು ಇದರ ಬಗ್ಗೆ ಸೂಕ್ತ ಗಮನ ಹರಿಸಬೇಕು.

೩–೦೦ ಪಿ. ಎಂ.

ನ್ಯಾಯಾಂಗ ತನಿಖೆ ಮಾಡುವುದಾಗಿ ನಿರ್ಧರಿಸುವುದು ಸ್ವಾಗತಾರ್ಹ, ಆದರೆ ಟರ್ಮ್ಸ್ ಆಫ್ ರೆಫರೆನ್ಸ್‌ಸ್ ಬಗ್ಗೆ ಯೋಚನೆ ಮಾಡಿದ್ದೀರಾ ಎನ್ನುವುದರ ಬಗ್ಗೆ ಹೇಳಲಿಲ್ಲ. ಕಡೆಯದಾಗಿ ನನ್ನ ಪ್ರಾರ್ಥನೆ ಏನೆಂದರೆ ಅಲ್ಲಿ ಆರು ಜನ ಗಾಯಾಳುಗಳು ಇದ್ದಾರೆ. ಅವರಿಗೇನೋ ಪರಿಹಾರ ನೀಡಿದ್ದಾರೆ. ಆದರೆ ಅವರಿಗೆ ಪರಿಹಾರ ಕೊಟ್ಟಿದ್ದು ಸಾಲದು. ಅದೇ ಪ್ರಕಾರ ಸತ್ತವರ ಕುಟುಂಬಗಳಿಗೆ ಎಷ್ಟು ಪರಿಹಾರ ಕೊಟ್ಟರೂ ಸಾಲದು. ಏಕೆಂದರೆ ಕಾಲವಾದವರು ಮತ್ತೆ ಬರುವುದಿಲ್ಲ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಪರಿಹಾರ ಕೊಡಲು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ೧೦೩ ಜನರನ್ನು ದಸ್ತಗಿರಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಅವರುಗಳಲ್ಲಿ ಎಷ್ಟು ಜನರನ್ನು ಬಿಟ್ಟಿದ್ದಾರೆ ಮತ್ತು ಇನ್ನು ಯಾರ್ಯಾರು ಜೈಲ್‌ನಲ್ಲಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ಕೊಡಬೇಕು. ನಿರಾಪರಾಧಿಗಳು ಯಾರ್ಯಾರು ಇದ್ದಾರೆ ಅವರನ್ನು ಬಿಟ್ಟುಬಿಡಬೇಕು. ಕಾನೂನು ಪ್ರಕಾರ ಏನು ಆಗಬೇಕೋ ಅದು ನಡೆಯಲಿ. ನ್ಯಾಯಾಂಗ ತನಿಖೆಗೆ ಕ್ರಮ ಕೈಗೊಂಡಿದ್ದಕ್ಕೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ದುರ್ಘಟನೆ ಬಗ್ಗೆ ನಮ್ಮ ನಾಯಕರು ಎಲ್ಲಾ ವಿಷಯಗಳನ್ನು ವಿವರವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಈ ಬಗ್ಗೆ ನ್ಯಾಯಾಂಗ ತನಿಖೆ ಆಜ್ಞೆ ಹೊರಡಿಸಿದ್ದಾರೆ. ಆದ್ದರಿಂದ ಹೆಚ್ಚಿಗೇನೂ ಹೇಳದೆ ಸದನದ ವೇಳೆಯನ್ನು ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಯವರಿಗೆ ನನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇಂತಹ ಘಟನೆಗಳು ನಡೆದಾಗ ಪೋಲೀಸ್ ಇಲಾಖೆಯವರು ಆದಷ್ಟು ತೀವ್ರಗತಿಯಲ್ಲಿ ಇನ್ನು ಮುಂದಾದರೂ ಕ್ರಮ ತೆಗೆದುಕೊಳ್ಳಬೇಕೆಂದು. ಸೂಚಿಸಬಯಸುತ್ತೇನೆ. ಏಕೆಂದರೆ ಎಲ್ಲಾ ಮುಗಿದ ಮೇಲೆ ಗೋಲಿಬಾರ್ ಮಾಡಿ ಕೊಲೆ ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಈ ವ್ಯವಸ್ಥೆ ಆಗಬೇಕು. ಇನ್ನು ಸತ್ತವರ ಕುಟುಂಬಗಳಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ಒದಗಿಸಿದ್ದಾರೆ. ಇದಕ್ಕೆಲ್ಲಾ ಕಾರಣಳಾದಂತಹ ಆ ಹೆಣ್ಣು ಮಗಳು ಇವತ್ತು ತುಂಬಾ ತೊಂದರೆಗೀಡಾಗಿದ್ದಾಳೆ. ಆ ಹೆಣ್ಣು ಮಗಳು ಇವತ್ತು ಸರ್ಕಾರ ಏನು ಪರಿಹಾರ ಒದಗಿಸಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಲಿಲ್ಲ. ಒಬ್ಬ ಸಾಮಾನ್ಯ ಬಡ ಕಾರ್ಮಿಕನ ಮಗಳಾದ ಆ ಹೆಣ್ಣು ಮಗಳಿಗೆ ಸರಿಯಾದ ಪರಿಹಾರ ವನ್ನು ಒದಗಿಸಬೇಕು. ಪರಿಹಾರವೆಂದರೆ ಆಕೆಗೆ ಮದವೆ ಮಾಡಿಸಬೇಕು ಮತ್ತು ನೌಕರಿಯನ್ನು ಕೂಡಿಸ ಬೇಕು. ಬೇಕಾದ ಎಲ್ಲಾ ವ್ಯವಸ್ಥೆಯನ್ನು ಒದಗಿಸಿ ಆ ಹೆಣ್ಣು ಮಗಳನ್ನು ಮತ್ತು ಆಕೆಯ ಕುಟುಂಬ ದವರನ್ನು ತೃಪ್ತಿಪಡಿಸಬೇಕು. ಏಕೆಂದರೆ ನಾಳೆ ಆಕೆಯನ್ನು ಯಾರೂ ಮದುವೆಯಾಗಲು ಮುಂದೆ ಬರುವುದಿಲ್ಲ. ಅವಳ ಬದುಕಿನಲ್ಲಿ ಇದೊಂದು ದೊಡ್ಡ ಪ್ರಶ್ನೆಯಾಗಿ ಉಳಿದುಬಿಡುತ್ತದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಶ್ರಿಮಾನ್ ಪಂಪಾಪತಿಯವರ ಪ್ರಕಾರ ಜೀವ ಹೋದರೆ ಪರಿಹಾರ ಇದೆ, ಕೈಕಾಲು ಹೋದರೆ ಪರಿಹಾರ ಇದೆ. ಆದರೆ ಒಂದು ಹೆಣ್ಣಿನ ಮೇಲೆ ಆತ್ಯಾಚಾರ ನಡೆದರೆ ಯಾವ ಪರಿಹಾರವಿದೆ ? ಆದ್ದರಿಂದ ಆ ಯುವತಿಗೆ ನೌಕರಿ, ಮದುವೆ ಇತ್ಯಾದಿಯನ್ನು ಮಾಡಿಸಿಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಇತ್ಯಾದಿ ಬೇಡ. ಆಕೆಗೆ ಮದುವೆ ಮಾಡಿಸಿ ಕೊಡಿ.

ಶ್ರೀ ಪಂಪಾಪತಿ.—ಇದೇನೂ ಸಣ್ಣ ವಿಷಯವಲ್ಲ. ಬಹಳ ಗಹನವಾದಂತಹ ವಿಷಯ, ಒಬ್ಬ ಹೆಣ್ಣುಮಗಳ ಜೀವನದ ಪ್ರಶ್ನೆ ಇದಾಗಿದೆ. ಆಕೆ ಬಹಳ ಕಾಲ ಬಾಳಿ ಬದುಕಬೇಕಾಗಿದೆ. ಸಾರ್ವಜನಿಕರಿಗೆ ರಕ್ಷಣೆ ಒದಗಿಸತಕ್ಕ ಪೋಲೀಸ್ ಇಲಾಖೆಯವರೇ ಈ ದುರ್ಘಟನೆಗೆ ಕಾರಣರಾಗಿರುವುದರಿಂದ ಮತ್ತು ಅವರಿಂದಾಗಿ ಇಷ್ಟೊಂದು ದುರ್ಘಟನೆ ನಡೆದಿರುವುದರಿಂದ ನಾವು ಆ ಹೆಂಗಸಿನ ಮೇಲೆ ಅನುಕಂಪವನ್ನು ತೋರಬೇಕಾಗಿದೆ. ಬೇಕಾದಂತಹ ಅನುಕೂಲತೆಗಳನ್ನು ಆಕೆಗೆ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ ಖಿಂಷ (ಷಹಾಬಾದ್).—ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ನಾನು ಮಾತ ನಾಡಬೇಕಾಗಿದ್ದ ವಿಷಯಗಳನ್ನೆಲ್ಲಾ ಶ್ರೀಮಾನ್ ಎಂ. ಎಸ್. ಕೃಷ್ಣನ್ ಮತ್ತು ಶ್ರೀಮಾನ್ ಪಂಪಾಪತಿಯವರು ಹೇಳಿಬಿಟ್ಟಿದ್ದಾರೆ.

ಅಧ್ಯಕ್ಷರು.—ನಿಮಗೇನಾದರೂ ಅನುಮಾನಗಳಿದ್ದರೆ ಕೇಳಿ,

ಶ್ರೀ ಕೆ. ಬಿ. ಶಾನಪ್ಪ ಭಿಂಷ.—ಏನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ. ಇತ್ತೀಚಿನ ಪತ್ರಿಕಾವರದಿ ಪ್ರಕಾರ ಆ ಹೆಂಗಸಿನ ಮೇಲೆ ಪೋಲೀಸಿನವರು ಬಹಳ ಒತ್ತಡ ಹಾಕಂತ್ತಿದ್ದಾರೆ. ಹಾಗೆ ಕೊಡಂ ಹೀಗೆ ಕೊಡು ಎಂದು ಒತ್ತಡ ಹಾಕುತ್ತಿದ್ದಾರೆಂದು ವರದಿಯಾಗಿದೆ. ಆ ಹೆಣ್ಣು ಮಗಳು ಹೇಳಿದ್ದನ್ನು ಪತ್ರಿಕೆಯವರು ಉಲ್ಲೇಖ ಮಾಡಿದ್ದಾರೆ. ಇದು ಸರ್ಕಾರಕ್ಕೆ ಘನತೆ ಗೌರವತರಕ್ಕಂಥ ವಿಚಾರ ಅಲ್ಲ. ಈ ರೀತಿ ಮಾಡುತ್ತಿದ್ದಾರೆಂದು ಪತ್ರಿಕೆಯವರು ವರದಿ ಮಾಡಿರುವುದನ್ನು ಇಲಾಖೆಯವರಿಗೆ ತಿಳಿಸಿದ್ದೀರಾ ? ನಡೆದಿರತಕ್ಕಂಥ ಘಟನೆ ಬಗ್ಗೆ ವಿವರಣೆಯನ್ನು ನ್ಯಾಯಾಂಗ ಆಯೋಗದ ಮುಂದೆ ನೀಡಲು ಅವಕಾಶ ವಿರಬೇಕು ಆದರೆ ಈ ರೀತಿ ಒತ್ತಡವನ್ನು ಆ ಹೆಣ್ಣುಮಗಳ ಮೇಲೆ ತರುತ್ತಿರುವುದು ಸರ್ಕಾರಕ್ಕೆ ಶೋಭೆ ತರತಕ್ಕದ್ದಲ್ಲ. ಈಗಲಾದರೂ ಕೂಡ ಪೋಲೀಸ್ ಇಲಾಖೆಯವರಿಗೆ ಸೂಕ್ತ ನಿರ್ದೇಶನಗಳನ್ನು ಕೊಡುತ್ತೀರಾ ಎಂಬುದು ನನ್ನ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರ ಕೊಡುವಾಗ ಈ ಅಂಶವನ್ನು ಕೂಡ ಸೇರಿಸಿ ಉತ್ತರ ಕೊಟ್ಟರೆ ಒಳ್ಳೆಯದು.

ಮತ್ತೊಂದು ವಿಚಾರವೇನೆಂದರೆ ಈ ಘಟನೆ ನಡೆದಾಗ ಆ ಕ್ಷೇತ್ರದ ಶಾಸಕರಾದ ಶ್ರೀ ರಾಮಪ್ಪನವರು ಅಲ್ಲಿ ಇರಲಿಲ್ಲ. ಬೇರೆ ಕಡೆಗೆ ಪ್ರವಾಸ ಹೋಗಿದ್ದ ಅವರು ೧೭ನೇ ತಾರೀಖಿನ ದಿವಸ ಊರಿಗೆ ಬಂದರು. ಒಂದು ಅಂಶವನ್ನು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಗಮನದಲ್ಲಿಟ್ಟುಕೊಳ್ಳುವುದು ಬಹಳ ಒಳ್ಳೆಯದು. ಅದೇನೆಂದರೆ ಈ ಘಟನೆ ಪ್ರಾರಂಭವಾದ ಮೇಲೆ ಕೆಲವು ಬೇರೆ ಬೇರೆ ಶಕ್ತಿಗಳು ತಮ್ಮ ಕೈವಾಡ ತೋರಿಸಲು ಪ್ರಯತ್ನ ಪಟ್ಟವು. ಇದಕ್ಕೆ ಅವಕಾಶವಿಲ್ಲದಂತೆ ಸ್ಥಳೀಯ ಜನ ಮತ್ತು ಮುಖಂಡರು ಹೆಚ್ಚಿನ ನಿಗಾ ಮತ್ತು ಆಸಕ್ತಿ ವಹಿಸಿದ್ದರಿಂದ ನಡೆದಂತಹ ಅನಾಹುತಗಳನ್ನು ನಿಲ್ಲಿಸುವುದಕ್ಕೆ ಸಾಧ್ಯ ಆಯ್ತು. ಇಂತಹ ಘಟನೆ ನಡೆದಾಗ ಅಲ್ಲಿ ಜನರು ಅಂಗಡಿ ಬಾಗಿಲುಗಳನ್ನು ಮುಚ್ಚಿ, ದಿನನಿತ್ಯದ ವ್ಯವಹಾರಗಳೆಲ್ಲಾ ತಟಸ್ಥವಾಗಿ ಅವರು ಮನೆಗಳಿಂದ ಹೊರಗೆ ಬರಲಾಗದ ಪರಿಸ್ಥಿತಿ ನಿರ್ಮಾಣವಾಯಿತು ಸಹಜವಾಗಿಯೇ ಇಂತಹ ಭಯದ ವಾತಾವರಣ ಮಾನಸಿಕವಾಗಿ ಜನರಲ್ಲಿ ಮೂಡುತ್ತದೆ. ಅಧಿಕಾರಿಗಳು ಮತ್ತು ಯಾವುದೇ ಇಲಾಖೆಯವರು ಮುಚ್ಚಿದ್ದ ಅಂಗಡಿಗಳನ್ನು ತೆರೆಸಿ, ದಿನನಿತ್ಯದ ವ್ಯವಹಾರಗಳನ್ನು ಪ್ರಾರಂಭಿಸಲಿಕ್ಕೆ ಆಸಕ್ತಿ ವಹಿಸಂತ್ತಿಲ್ಲವೆಂದು ನಾನು ಕೇಳಿದ್ದೇನೆ. ಸುಮಾರಾಗಿ ನನಗೆ ಗೊತ್ತಿರುವ ಹಾಗೆ ಶ್ರೀ ರಾಮಪ್ಪನವರು ೧೯ನೇ ತಾರೀಖಿಗೆ ಬಂದಕೂಡಲೇ ಅಲ್ಲಿರತಕ್ಕಂಥ ಜನರು ಅನೇಕರನ್ನು ಸೇರಿಸಿಕೊಂಡು ಪ್ರಯತ್ನ ನಡೆಸಿದ್ದರಿಂದ ಅಂಗಡಿಗಳ ಬಾಗಿಲುಗಳನ್ನು ತೆಗೆಯಂಲಾಯಿತು ಮತ್ತು ಜನರು ಧೈರ್ಯವಾಗಿ ರಸ್ತೆಯಲ್ಲಿ ಓಡಾಡಂವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಈ ಕೆಲಸವನ್ನು ಇವರು ಮಾಡತಕ್ಕಂಥ ಸಂದರ್ಭದಲ್ಲಿ ಇಲಾಖೆಯವರು ಏಕೆ ಸಹಕಾರವನ್ನು ಕೊಡಲಿಲ್ಲ ಎನ್ನುತಕ್ಕಂತಾದ್ದು ಈಗಿರುವ ಪ್ರಶ್ನೆಯಾಗಿದೆ. ನಾನು ಮತ್ತು ನನ್ನ ಶಾಸಕ ಮಿತ್ರರು ಸಾವಿರಾರು ಜನರೊಡನೆ ಪ್ರಸ್ತಾಪ ಮಾಡಿದ್ದೇವೆ. ನಾನಂ ಹೋದಾಗ ಸಾವಿರಾರು ಜನರು ಈ ವಿಷಯದ ಬಗ್ಗೆ ಹೇಳಿದರು. ಇಲಾಖೆಯವರು ಪಿತಕ್ಕೆ ಸಹಕಾರ ಕೊಡಲಿಲ್ಲ. ಇವರು ತಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿ ಲೋಪ ಮಾಡಿರುವುದು ಸರಿಯಾದುದೇ ಎಂದು ನಾನು ಕೇಳುತ್ತೇನೆ. ಇನ್ನೂ ಕೆಲವು ವಿಚಾರಗಳನ್ನು ನಾನು ಕೇಳಿದ್ದೇನೆ. ಅವುಗಳು ನಾಳೆ ಎನ್‌ಕ್ವೈರಿ ಕಮಿಷನ್ ಮುಂದೆ ಬರುತ್ತವೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸ್ ಇಲಾಖೆಯಲ್ಲಿ ಮೇಜರ್ ಶೇಕ್ ಅಪ್ ಬಗ್ಗೆ ಮಾನ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಅದು ಏನೆಂಬುದನ್ನು ಅವರು ಉತ್ತರ ಕೊಡುವಾಗ ಹೇಳಿದರೆ, ಒಳ್ಳೆಯದಂ.

ಶ್ರೀ ಎಂ, ರಾಮಪ್ಪ.—ನಾನು ೧೯ನೇ ತಾರೀಖು ಮುಂಜಾನೆ ಮಾನ್ಯ ಮಂತ್ರಿಗಳಾದಂತಹ ಶ್ರೀಮಾನ್ ಅಜೀಜ್ ಸೇಠ್‌ರವರನ್ನು ಗೆಸ್ಟ್ ಹೌಸಿನಲ್ಲಿ ನೋಡಿದ್ದೇನೆ. ಅಲ್ಲಿಗೆ ಮಾನ್ಯ ಸಚಿವರು ಏರ್ ಕಂಡೀಷನ್ ಗೆಸ್ಟ್ ಹೌಸ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಬಂದಿದ್ದರೋ ಅಥವಾ ಅಲ್ಲಿ ರಾಜಕೀಯ ಮಾಡುವುದಕ್ಕೆ ಬಂದಿದ್ದರೋ ಎಂಬುದು ನನಗೆ ಅರ್ಥವಾಗಲಿಲ್ಲ. ನಾನು ಮತ್ತು ನನ್ನ ಅನೇಕ ಸ್ನೇಹಿತರು ಅಲ್ಲಿಯ ಬಜಾರಿಗೆ ಹೋಗಿ ಶಾಂತಿ ವಾತಾವರಣವನ್ನು ನಿರ್ಮಿಸುವುದಕ್ಕೆ ಪ್ರಯತ್ನ ಪಟ್ಟವನು ನಾನಂ. ಆದರೆ ಸಚಿವರು ಅಲ್ಲಿಗೆ ಬಂದು ಬರೀ ಗೆಸ್ಟ್ ಹೌಸ್‌ನಲ್ಲಿ ಇದ್ದು ವಾಪಸ್ಸು ಬೆಂಗಳೂರಿಗೆ ಬಂದಂ, ನಂತರ ಎಲ್ಲವನ್ನೂ ನಾನೇ ಸರಿ ಮಾಡಿದ್ದೇನೆಂದಂ ಹೇಳುವುದು ಸರಿಯಲ್ಲ. ಅಲ್ಲಿಯಂ ಶಾಸಕನಾಗಿ ನನಗೆ ಯಾವ ರೀತಿಯ ವಿಚಾರವನ್ನೂ ಕೂಡ ಅವರಂ ತಿಳಿಸಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಬಳ್ಳಾರಿಗೆ ಹೋಗಿದ್ದಾಗ ಅಲ್ಲಿಯ ಸ್ಥಳೀಯ ಶಾಸಕರಿಗೂ ಹೇಳಿಕಳುಸುವ ಸೌಜನ್ಯವನ್ನೂ ಕೂಡ ತೋರಲಿಲ್ಲವೆಂಬುದು ಮಾನ್ಯ ರಾಮಪ್ಪನವರ ಆಪಾದನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ. ವಿವರಗಳಿಗೆ ಹೋಗತಕ್ಕಂತಹದ್ದು ಸರಿಯಲ್ಲ. ಕಾರಣ ವಿಚಾರಣೆ ನಡೆಯುತ್ತಿರುವುದರಿಂದ ಆ ಕೆಲಸವನ್ನು ನಾವು ಮಾಡಕೂಡದು. ಆದ್ದರಿಂದ ಆ ಕೆಲಸ ನ್ಯಾಯಾಂಗ ತನಿಖೆಯಾದಾಗ ನ್ಯಾಯಾಧೀಶರು ಮಾಡುತ್ತಾರೆ. ನಮಗೆ ಅಲ್ಲಿಯ ಸಮಾಚಾರ ಗೊತ್ತಾಗಿದ್ದು ೧೪ನೇ ತಾರೀಖಿನ ರಾತ್ರಿ, ಅಂದರೆ ೧೫ನೇ ತಾರೀಖಿನ ಮುಂಜಾನೆ ಮಧ್ಯಾಹ್ನದ ವರೆಗೂ ಇಲ್ಲಿ ಯಾರಿಗೂ ವಿಷಯ ಗೊತ್ತಾಗಲಿಲ್ಲ. ಅದು ಆದ ಮೇಲೆ ಗೊತ್ತಾದುದು. ನಾನು ವಿವರಕ್ಕೆ ಹೋಗುವುದಿಲ್ಲ. ಇದು ನಡೆದು ಹೋದ ಮೇಲೆ ಸ್ವಾಭಾವಿಕವಾಗಿ ಇದರ ವಿರುದ್ಧ, ಜನತೆಯಲ್ಲಿ ಕ್ರೋಧ ಉಂಟಾಯಿತು. ೧೪ನೇ ತಾರೀಖು ಮೊದಲು ಘಟನೆಯಾಯಿತು. ಇದು ಆದ ಮೇಲೆ ಅದರ ಸಮಾಚಾರ ೧೬ನೇ ತಾರೀಖು ಮಧ್ಯಾಹ್ನ ಸಂಜೆ ಹೊತ್ತಿಗೆ ತಿಳಿಯಿತು. ನಾನು ತಕ್ಷಣ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರಿಗೆ ''ನೀವು ತಕ್ಷಣ ಅಲ್ಲಿಗೆ ಹೋಗಬೇಕು'' ಎಂಬುದಾಗಿ ತಿಳಿಸಿದೆ. ಆದೇ ರೀತಿ ಅವರು ಹೋದರು. ಮರುದಿವಸ ಬೆಳಿಗ್ಗೆ ಅಲ್ಲಿಗೆ ಮುಟ್ಟಿದರು. ಆದೇ ರೀತಿ ವಿಭಾಗಾಧಿಕಾರಿಗಳಿಗೂ ಕೂಡ ಫೋನ್ ಮಾಡಿ ೧೬ನೇ ತಾರೀಖಿಗೆ ಹೇಳಿದ್ದೇನೆ. ನನಗೆ ವಿಚಾರ ತಿಳಿದ ಅರ್ಧ ಗಂಟೆಯೊಳಗೆ ತೆಗೆದುಕೊಂಡಂತಹ ಕ್ರಮ ಇದು. ಅವರೂ ಕೂಡ ೧೬ನೇ ತಾರೀಖು ಮುಟ್ಟಿದರು. ಮಾನ್ಯ ಸದಸ್ಯರು ಫಸ್ಟ್ ರಿಪೋರ್ಟ್ ಯಾವಗ ಬಂತು ಎಂಬುದಾಗಿ ಹೇಳಿದರು. ಅದಕ್ಕೆ ಉತ್ತರ ೧೬ನೇ ತಾರೀಖು ಮಧ್ಯಾಹ್ನದ ಮೇಲೆ. ಎಸ್.ಪಿ. ಯವರು ಜನರನ್ನು ಬಂಧಿಸಿ ನಂತರ ಬಿಟ್ಟದ್ದಾರೆ ಎಂಬುದಾಗಿ ಹೇಳಿದ್ದಾರೆ. ೧೦೩ ಜನರನ್ನು ಬಂಧಿಸಿದ್ದರು. ಆದರಲ್ಲಿ ೧೦೧ ಜನರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ, ಇಬ್ಬರು ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ ಮಟ್ಟಾ ವಿಚಾರಪನ್ನ ಶ್ರೀಮಾನ್ ಕೃಷ್ಣನ್‌ರವರು ಪ್ರಸ್ತಾಪ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಹೇಳಿಕೆಯ ಪ್ರಕಾರ ಇದು ೧೪ನೇ ತಾರೀಖಿನ ರಾತ್ರಿಯು ಘಟನೆ ಆದರೆ ಎಫ್.ಐ.ಆರ್. ೧೬ನೇ ತಾರೀಖು, ಮತ್ತೆ ಕಂಪ್ಲೇಂಟ್ ಪಗೈರೆ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಂದರೆ ೧೪–೧೫ ತಾರೀಖಿನಂದು ಅಂದರೆ ೧೪ನೇ ತಾರೀಖಿನ ರಾತ್ರಿ ಅಂದರೆ ೧೫ ಬೆಳಿಗ್ಗೆ ತಾರೀಖಿನ ಘಟನೆ ನಡೆದಿದೆ. ಈ ನಂತರ ಅಲ್ಲಿಯ ಸಾಪಾನ್ಯ ಜನತೆಗೆ ಇದರ ಬಗ್ಗೆ ಸುದ್ದಿ ತಲುಪಿದ್ದು ೧೫ನೇ ತಾರೀಖಿನ ದಿವಸ ರಾತ್ರಿ. ೧೬ನೇ ತಾರೀಖಿನ ದಿವಸ ಬೆಳಿಗ್ಗೆ ಶ್ರೀಮಾನ್ ರಾಮಪ್ಪ ನವರಿಗೂ ಈ ವಿಷಯ ಗೊತ್ತಾಗಿರಬೇಕು.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ರಾಮಪ್ಪರವರಿಗೆ ಗೊತ್ತಿಲ್ಲ. ೧೪ನೇ ತಾರೀಖಿನ ಮಧ್ಯ ರಾತ್ರಿ ಅಂದರೆ ೧೫ನೆ ತಾರೀಖಿನ ಬೆಳಿಗ್ಗೆ ಈ ಒಂದು ಘಟನೆ ನಡೆದಿದ್ದರೂ ೧೫ನೇ ತಾರೀಖಿನಂದೇ ಎಫ್.ಐ.ಆರ್. ಏತಕ್ಕೆ ಹಾಕಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಏತಕ್ಕೆ ಹಾಕಲಿಲ್ಲ ಎಂಬುದು ನ್ಯಾಯಾಂಗ ತನಿಕೆಯಲ್ಲಿ ಗೊತ್ತಾಗಬೇಕು. ಏತಕ್ಕೆ ಹಾಕಲಿಲ್ಲ ಎಷ್ಟು ಗಂಟೆಯಲ್ಲಾಯಿತು ಯಾರ್ಯಾರು ೪ ಜನರೋ, ೬ ಜನರೋ ಈ ಎಲ್ಲ ವಿಚಾರ ನ್ಯಾಯಾಂಗ ತನಿಖೆಯಲ್ಲಿ ಹೊರಗೆ ಬರುತ್ತದೆ. ಈಗ ಆ ವಿವರಕ್ಕೆ ಹೋಗತಕ್ಕಂತಹದ್ದು ಸೂಕ್ತ ಅಲ್ಲ ಮಟ್ಟಾ ವಿಚಾರದಲ್ಲಿ ಶ್ರೀಮಾನ್ ಕೃಷ್ಣನ್‌ರವರು ಪ್ರಸ್ತಾಪ ಮಾಡಿದರು. ಮಟ್ಟಾ ಒಂದು ಆತ್ಯಂತ ಹೀನಕರವಾದ ಜೂಜು. ಇದು ಎಲ್ಲೆಲ್ಲಿ ನಡೆಯುತ್ತಿದೆ, ಇದರ ಹಿಂದೆ ಯಾರ್ಯಾರು ಇದ್ದಾರೆ, ಇದರಿಂದ ಸಮಾಜದಲ್ಲಿ ಯಾವ ರೀತಿಯ ದುಷ್ಪರಿಣಾಮವಾಗುತ್ತಿದೆ. ಈ ಎಲ್ಲಾ ವಿಚಾರ ನನಗೆ ಗೊತ್ತುಂಟು, ಇದು ಒಂದು ಭಯಂಕರ ರೋಗ. ನಮ್ಮಲ್ಲಿ ಅನೇಕ ಕಡೆ ಅಂಟು ರೋಗಗಳಿವೆ. ಅದೇ ರೀತಿ ಇದು ಒಂದು ರೀತಿಯ ಅಂಟು ರೋಗ ಇದನ್ನು ನಿರ್ಮೂಲ ಮಾಡುವುದಕ್ಕೆ ಕಟಿಬದ್ಧನಾಗಿದ್ದೇನೆ. ಇದರ ಹಿಂದೆ ಬೇರೆ ಯಾರೇ ಇರಲಿ. ಆ ಬಗ್ಗೆ ಹೆಚ್ಚು ಹೇಳುವಂತಹ ಸಂದರ್ಭ ಇದಲ್ಲ. ಸಂದರ್ಭ ಬಂದಾಗ ಎಲ್ಲವನ್ನೂ ಹೇಳುತ್ತೇನೆ. ಬಳ್ಳಾರಿಯ ಮಟ್ಟಾದ ಹಿಂದೆ ಯಾರ್ಯಾರು ಇದ್ದಾರೆ ಎಂಬ ಪ್ರಶ್ನೆ ಬಂದಾಗ ಹೇಳುತ್ತೇನೆ. ಇವತ್ತು ಬೇಡ. ಆಮೇಲೆ ಶ್ರೀಮಾನ್ ಪಂಪಾಪತಿಯವರೂ ಹಾಗೂ ಶಾನಪ್ಪನವರು ಇಬ್ಬರೂ ಅತ್ಯಾಚಾರಕ್ಕೊಳಗಾದ ಮಹಿಳೆಗೆ ಏನಾದರೂ ಸಹಾಯ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಆ ಬಗ್ಗೆ ವಿಚಾರ ಮಾಡುತ್ತೇನೆ. ಇಲ್ಲಿ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಆ ಹೆಣ್ಣು ಮಗಳ ತಂದೆ ತಾಯಿಯವರ ಒಪ್ಪಿಗೆ ಬೇಕಾಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ಅತ್ಯಾಚ್ಚಾರಕ್ಕೊಳಗಾದಂತ ಆ ಹೆಣ್ಣು ಮಗಳ ಜವಾಬ್ದಾರಿಯನ್ನು ನಿಮ್ಮ ಸಚಿವ ಸಂಪುಟದಲ್ಲಿರುವ ಇಬ್ಬರು ಅವಿವಾಹಿತ ಸಚಿವರಲ್ಲೊಬ್ಬರು ವಹಿಸಿಕೊಂಡರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಹಾಸ್ಯಕ್ಕೆ ಅರ್ಹವಾದ ಪ್ರಶ್ನೆಯಲ್ಲ. ಶ್ರೀಮಾನ್ ನಾರಾಯಣಕುಮಾರ್ ರವರಿಗೆ ಮದುವೆಯಾಗಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಅವರಿಗೆ ಈ ರೀತಿಯ ಸ್ಫೂರ್ತಿ ಬಂದಿರಬೇಕಾದರೆ ಅವರಿಗಿನ್ನೂ ಮದುವೆಯಾಗಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ಕಾನೂನು ಪ್ರಕಾರ ಶ್ರೀ ನಾರಾಯಣ್‌ಕುಮಾರ್ ರವರಿಗೆ ಅವಕಾಶ ಇಲ್ಲ. ಕಾನೂನು ಮಂತ್ರಿಗಳಿಗೆ ಅದಕ್ಕೆ ಅವಕಾಶ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ —ನಾನು ಕೌಲ್ ಬಜಾರಿಗೆ ಹೋಗಿದ್ದೆ. ನನ್ನ ಜೊತೆಯಲ್ಲಿ ೩–೪ ಜನ ನನ್ನ ಸಹೋದ್ಯೋಗಿಗಳೂ ಇದ್ದರು. ನಾನು ಮೊಟ್ಟಮೊದಲು ಹೋದದ್ದು ಆಸ್ಪತ್ರೆಗೆ. ಆಸ್ಪತ್ರೆಯಿಂದ ಎಲ್ಲೆಲ್ಲಿ ಹಾನಿಯಾಗಿತ್ತೋ, ಆ ಸ್ಥಳಗಳಿಗೆಲ್ಲಾ ಹೋಗಿದ್ದೆವು. ಅಂದರೆ ಪೆಟ್ರೋಲ್ ಬಂಕ್‌ಗೆ ಬೆಂಕಿ ಬಿದ್ದ ಜಾಗಕ್ಕೆ, ಅನಾಹುತ ನಡೆದಂತಹ ಸಿನಿಮಾ ತಿಯೇಟರ್‌ಗೆ ಎಲ್ಲಾ ಭೇಟಿ ಕೊಟ್ಟು ಹಿಂದಿರುಗುವಾಗ, ಗೆಸ್ಟ್ ಹೌಸ್ ಹತ್ತಿರ ಬಹಳಷ್ಟು ಜನ ಸೇರಿದ್ದಾರೆಂಬ ವಿಷಯ ನನಗೆ ತಿಳಿಯಿತು. ನಾನು ಅಲ್ಲಿಗೆ ಬಂದಾಗಲೂ ಕೂಡ ಶ್ರೀಮಾನ್ ರಾಮಪ್ಪನವರ ದರ್ಶನ ನನಗೆ ಆಗಲಿಲ್ಲ. ಹಿಂದಿನ ದಿವಸ ಅವರಿಗೆ ಡಿವಿಷನಲ್ ಕಮೀಷನರ್ ತಿಳಿಸಿದ್ದರು, ಶ್ರೀ ಪ್ರಕಾಶ್ ತಿಳಿಸಿದ್ದರು. ಆಜೀಜ್ ಸೇಟ್‌ರವರು ತಿಳಿಸಿದ್ದರು.

ಶ್ರೀ ಎಂ. ರಾಮಪ್ಪ.—ಆಜೀಜ್ ಸೇಟ್‌ರವರು ಬಂದಿದ್ದರು, ಆದರೆ ನನಗೆ ಯಾರೂ ತಿಳಿಸಲಿಲ್ಲ. ನಾನು ರಾತ್ರಿ ೮–೯ ಗಂಟೆಯವರೆಗೂ ಗೆಸ್ಟ್‌ಹೌಸ್‌ನಲ್ಲಿ ಇದ್ದೆ. ಅವರು ಬೆಳಗಿನ ಜಾವ ಬಂದು ಹೋಗಿದ್ದಾರೆ. ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿರುವುದರಿಂದ ನನಗೆ ತಿಳಿಸಬೇಡವೇ, ಆ ಕ್ಷೇತ್ರದ ಶಾಸಕರನ್ನು ಅಗೌರವದಿಂದ ಕಾಣುವುದು ಸರಿಯೇ ? ಶ್ರೀಮಾನ್ ಆಜೀಜ್ ಸೇಟ್‌ರವರು ಅಲ್ಲಿ ರಾಜಕೀಯ ಮಾಡಲಿಕ್ಕೆ ಬಂದಿದ್ದಾರೆ. ಅವರು ಇದನ್ನು ವಿಚಾರಣೆ ಮಾಡಲು ಗೆಸ್ಟ್‌ಹೌಸ್‌ಗೆ ಬಂದಿದ್ದಮೇಲೆ ಅಲ್ಲಿ ಕೂತಿರಬೇಕಲಾ ; ನಾನು ಹೀಗೆ ಹೇಳಿದ ಮಾತ್ರಕ್ಕೆ ಸಚಿವರ ಮೇಲೆ ತಪ್ಪು ಹೊರಿಸಬೇಕೆಂತಲ್ಲಾ. ನಾನು ಆ ಕ್ಷೇತ್ರದ ಶಾಸಕನಾಗಿರುವುದರಿಂದ ನನಗೆ ವಿಷಯ ತಿಳಿಸಬೇಡವೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಾಮಾನ್ಯವಾಗಿ ಸಚಿವರು ಪ್ರವಾಸ ಮಾಡಿದಾಗ ಅಲ್ಲಿಯ ಶಾಸಕರಿಗೆ ತಿಳಿಸಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಅದು ಆ ರೀತಿಯಾದ ಪ್ರವಾಸವಲ್ಲ, ಅದು ವಿಶೇಷವಾದ ಪ್ರವಾಸ. ತಮಗೆ ಹೇಳಬೇಕಾದರೆ ನಾನು ಶ್ರೀ ಆಜೀಜ್ ಸೇಟ್‌ರವರಿಗೆ ಹೇಳಿದಾಗ, ಪ್ರಕಾಶ್‌ರವರಿಗೆ ಹೇಳಿದಾಗ ತಕ್ಷಣವೇ ಅವರು ಹೊರಟಿದ್ದಾರೆ. ಬಹುಶಃ ಅವರು ಬಟ್ಟೆಯನ್ನು ತೆಗೆದುಕೊಂಡು ಹೋಗಲಿಲ್ಲ ಅಂತ ಕಾಣುತ್ತೆ. ಅವರು ಬಟ್ಟೆ ತೆಗೆದುಕೊಂಡು ಹೋಗುವುದಕ್ಕೂ ಕೂಡ ಸಮಯ ಸಿಕ್ಕಲಿಲ್ಲ. ಒಂದು ಗಂಟೆಯ ಅವಕಾಶವೂ ಅವರಿಗೆ ಸಿಕ್ಕಲಿಲ್ಲ. ಅವರಿಗೆ ನಾನು ವಿಷಯ ತಿಳಿಸಿದ ಕೂಡಲೇ ತಕ್ಷಣವೇ ಹೊರಟು ಅಲ್ಲಿಗೆ ಬೆಳಗಿನ ಜಾವ ಬಂದು ಮುಟ್ಟಿದ್ದಾರೆ. ವಾಸ್ತವಾಂಶ ಹೀಗಿದೆ. ಆದರೂ ಅವರು ಹೇಳಿದ ಹಾಗೆ ಸಂಬಂಧಪಟ್ಟ ಶಾಸಕರಿಗೆ ತಿಳಿಸಬೇಕಾಗಿತ್ತು ಅನ್ನುವುದನ್ನೂ ನಾನು ಒಪ್ಪುತ್ತೇನೆ ; ಆದು ಸಚಿವರ ಸೌಜನ್ಯವೂ ಹೌದು ; ಅವರ ಕರ್ತವ್ಯವೂ ಹೌದು. ಆ ಸಂದರ್ಭದಲ್ಲಿ ವಿಶೇಷವಾದ ಪರಿಸ್ಥಿತಿ ಉದ್ಭವಿಸಿರುವುದರಿಂದ ತಕ್ಷಣವೇ ಹೋಗಬೇಕಾಯಿತು.

ಶ್ರೀ ಎಂ. ಪಿ. ಪ್ರಕಾಶ್.—ಸ್ವಾಮಿ, ಅವರು ೨ ಗಂಟೆಗೆ ಬಂದಿದ್ದರು ನಾನು ೨½ ಗಂಟೆಗೆ ಹೋಗಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ನಾನು ಹೇಳಿದ ತಕ್ಷಣವೇ ಹೋಗಿದ್ದಾರೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ತಮಗೆ ಪೋಲೀಸ್ ಸಿಬ್ಬಂದಿ ಇತ್ತು, ವೈರ್‌ಲೆಸ್ ಮೆಸ್ಸೇಜ್ ಇತ್ತು. ತಕ್ಷಣವೇ ತಿಳಿಸಬಹುದಾಗಿತ್ತಲಾ. ಇದನ್ನು ನೋಡಿದರೆ ಆ ಕ್ಷೇತ್ರದ ಶಾಸಕರನ್ನು ಅಗೌರವದಿಂದ ಕಂಡ ಹಾಗಾಯಿತಲಾ.

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಆಗಿರತಕ್ಕಂಥಾದ್ದು ಅತ್ಯಾಚಾರದ ಒಂದು ಘಟನೆ, ಅದು ಬಹಳ ಮಹತ್ವದ್ದೋ ; ಅಥವಾ ಎಂ. ಎಲ್. ಎ.ರವರನ್ನು ಬೇಟಿಯಾಗಲಿಲ್ಲಿ ಅನ್ನುವುದು ಮಹತ್ವದ್ದೋ; ಯಾವುದು ಮಂಹತ್ವದ್ದು ? ಇದರಲ್ಲಿ ರಾಜಕೀಯ ಏನೂ ಇಲ್ಲ. ಮಂಧ್ಯೆ ಮಧ್ಯೆ ಈ ರೀತಿ ಇಂಟರಪಫ್ಷನ್ ಮಾಡಿದರೆ ಕೆಲವು ವಿಷಯಗಳನ್ನು ಹೇಳಂವುದಕ್ಕಾಗುವುದಿಲ್ಲ. ಮೊದಲು ನಾನು ಈ ಬಗ್ಗೆ ಏನೊಂದು ಸ್ಟೇಟ್‌ಮೆಂಟ್ ಮಾಡುತ್ತೇನೊ ಅದಕ್ಕೆ ಅವಕಾಶ ಕೊಡಿ. ನಾನು ಹೇಳಿ ಮುಗಿಸಿದ ಮೇಲೆ ಅವರು ಕೇಳಲಿ. ಅಲ್ಲಿಯವರೆಗೆ ಸ್ವಲ್ಪ ತಾವು ತಾಳ್ಮೆ ತೋರಿಸಿ ; ಸಾಕು. ಕೆಲವು ಸಂದರ್ಭ ಗಳಲ್ಲಿ ಈ ರೀತಿಯಾಗಿ ಆರೋಪ ಪ್ರತ್ಯಾರೋಪಗಳು ಬರುತ್ತದೆ. ನನಗೆ ತಿಳಿದ ಮಟ್ಟಿಗೆ ಅಲ್ಲಿಗೆ ಮಂಂತ್ರಿಗಳು ಬರುತ್ತಾರೆ ಎಂದು ಹೇಳಲಿಲ್ಲವೇ ? ನಾವು ಸ್ವಲ್ಪ ಯೋಚಿಸಬೇಕು, ಯಾವ ವಿಷಯಂ ಮಂಹತ್ವದ್ದು ಎಂದು. ಅಲ್ಲಿ ಆಗಿರತಕ್ಕಂಥಾ ಹೆಣ್ಣು ಮಂಗಳ ಮೇಲಿನ ಅತ್ಯಾಚಾರ ಗಮನಿಸಬೇಕಾದ್ದು ಮಹತ್ವದ್ದೋ, ಅಥವಾ ಎಂ.ಎಲ್.ಎ ಭೇಟಿ ಆಗಲಿಲ್ಲಾ ಅನ್ನುವುದು ಮಹತ್ವದ್ದೋ, ಎಂದು ನೋಡಬೇಕು. ಇದು ಎಲ್ಲರ ಗೌರವದ ಪ್ರಶ್ನೆ. ಸಾಮಾನ್ಯವಾಗಿ ನಿಮ್ಮ ಹತ್ತಿರ ಮಂಂತ್ರಿಗಳೂ ಬರಬೇಕು ; ಮಂತ್ರಿಗಳ ಹತ್ತಿರ ನೀವೂ ಹೋಗಬೇಕಾಗುತ್ತದೆ. ಅದು ಬಿಟ್ಟು ಮಂತ್ರಿಗಳನ್ನು ಹೆದರಿಸುವುದಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಹೆದರಿಸುವ ಬಗ್ಗೆ ಚರ್ಚೆ ಮಾಡುವುದು ಅನಾವಶ್ಯಕ. ಅಲ್ಲಿ ಆಗಿರತಕ್ಕಂಥಾ ಒಂದು ವಿಶೇಷ ಪರಿಸ್ಥಿತಿಯನ್ನು ಹತೋಟಿಗೆ ತರಲು ಮತ್ತು ಉದ್ಬವಿಸಿರತಕ್ಕ ಸಮಸ್ಯೆ ಯನ್ನು ಬಗೆಹರಿಸಲು ಇವರಿಗೆ ತಿಳಿಸಿದ್ದರೆ ಸ್ವಲ್ಪ ಅನುಕೂಲವಾಗುತ್ತಿತ್ತು. ಏಕೆಂದರೆ ಅವರು ಆ ಕ್ಷೇತ್ರದ ಶಾಸಕರೂ ಆಗಿರುವುದರಿಂದ ಅವರು ಅಲ್ಲಿ ಮುಖ್ಯಪಾತ್ರವನ್ನು ವಹಿಸಿ ಅವರ ಗೌರವ ಘನತೆಗೂ ಒಂದು ಸ್ಥಾನಮಾನ ಇರುತ್ತಿತ್ತು. ಮಾನ್ಯ ಮಂತ್ರಿಗಳು ಇದನ್ನು ತಿಳಿದುಕೊಂಡಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅವರನ್ನು ಕಡೆಗಣಿಸಬೇಕು ಎನ್ನುವ ದೃಷ್ಟಿ ಅವರಲ್ಲಿಲ್ಲ ಅನ್ನುವುದು ನನಗೆ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮಗೆ ಆವಾಗಲೇ ಹೇಳಲಿಲ್ಲವೇ ? ಸಚಿವರು ಪ್ರವಾಸ ಹೋದಂಥಾ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ತಿಳಿಸಂವುದು ಅವರ ಸೌಜನ್ಯವೂ ಹೌದು, ಮಂತ್ತು ಅವರ ಕರ್ತವ್ಯವೂ ಹೌದು.

ಶ್ರೀ ಎಸ್. ಬಂಗಾರಪ್ಪ.—ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಘನತೆ ಗೌರವ ಅನ್ನುವುದು ಗಾಳಿ ಮಾತು ಆಗಬಾರದು. ಅದೇನೇ ಇರಲಿ ನಾನು ಹೇಳುವುದು ಇಷ್ಟೆ.

ಅಧ್ಯಕ್ಷರು.—ಇನ್ನು ಮುಂದಿನ ವಿಚಾರಕ್ಕೆ ಹೋಗೋಣ. ಮತ್ತೆ ಮತ್ತೆ ಹಿಂದಕ್ಕೆ ಹೋಗಂವುದು ಬೇಡ, ಇಷ್ಟು ಸಾಕು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಪೋಲೀಸ್ ಇಲಾಖೆಯಲಿ ಶೇಕ್‌ಅಪ್ ಮಾಡಿದ್ದಿರಾ ? ಹಾಗಿದ್ದರೆ ಅಲ್ಲಿರುವ ಎಸ್. ಪಿ. ಯವರನ್ನು ಏನಾದರೂ ವರ್ಗ ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಇನ್ನೊಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಬಿಜಾಪುರದ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದಕ್ಕೆ ತಾವು ನಾಳೆ ಅವಕಾಶ ಕೊಡುವುದಾದರೆ ನನ್ನ ಅಭ್ಯಂತರವೇನೂ ಇಲ್ಲ.

ಅಧ್ಯಕ್ಷರು.—ಒಂದು ದಿವಸಕ್ಕೆ ಒಂದೇ ಅಡ್ಜರ್ನ್‌ಮೆಂಟ್ ಮೋಷನ್. ಇನ್ನೊಂದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಇನ್ನೊಂದು ಕೇಳಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ನಾಳೆ ಎಂದು ವೇಳೆ ಅದನ್ನು ತೆಗೆದುಕೊಂಡರೆ ಆದಕ್ಕೆ ಡಿಸ್‌ಅಲೌಡ್ ಎಂದು ಉತ್ತರ ಬಂದುಬಿಟ್ಟರೆ, ಅದಕ್ಕೆ ನನಗೆ ಭಯವಾಗುತ್ತದೆ.

ಅಧ್ಯಕ್ಷರು.—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಯಾವರೀತಿಯಾಗಿಯೂ ನೀವು ಅದಕ್ಕೆ ಹೆದರಬೇಕಾಗಿಲ್ಲ. ಇನ್ನು ಮುಂದಿನ ವಿಷಯ ತೆಗೆದುಕೊಳ್ಳೋಣ.